Doc 141
T-P-2

Regd No BG 155 11-9-1969

52nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆಯವಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಸ್ಥಾಪಕರು: ಅರಸುನೆ ಸಿರಸ್ತೇದಾರ್ ಎಂ ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಪಂಚೆನ್ ಲಾಮಾ ಸ್ವಾಗತಕ್ಕೆ ವ್ಯವಸ್ಥೆ

ನೀರು ನಿಲ್ಲುತ್ತೆ

ಮೈಸೂರು— ಹೊಂಗಳ್ಳಿ ಪಂಪಿಂಗ್ ಸ್ಟೇಷನ್ನಿನಲ್ಲಿ ತುರ್ತು ರಿಪೇರಿ ಕೆಲಸಗಳನ್ನು ಮಾಡಬೇಕಾಗಿರುವುದರಿಂದ ಈ ದಿನ 11-9-69 ಸಾಯಂಕಾಲದಿಂದ 12 9-69 ರ ಮಧ್ಯಾಹ್ನದವರೆಗೂ ನೀರಿನ ಸರಬರಾಜಿರುವದಿಲ್ಲವೆಂದು ಮುನಿಸಿಪಲ್ ಕಮಿಷನರ್ ಪ್ರಕಟಿಸಿದ್ದಾರೆ.

"ಸತ್ಯವಾದಿ" ಯ ಸ್ವರ್ಣೋತ್ಸವ

ಭಾನುವಾರ **28-9-1969**

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾಪೀಠದ್ವಯರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯನವರು, ಶ್ರೀ ಮಾಧವ್ ಶಿನ್ಯಾವರರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ.ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯಪೊಡಸಿ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವನೆಂದು ತತ್ಕೃಜ್ಞತಾಪೂರ್ವಕವಂದಿಸುತ್ತೇವೆ.

ಸಂಪಾದಕ : 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

5000 ವರ್ಷಗಳ ಮಾನವ

ಮೂಲಾಟ್ಯಾ (ಟರ್ಕಿ)— ಬಸೆಬಾತಿ ಗ್ರಾಮದಲ್ಲಿ ಭೂಗರ್ಭ ಶೋಧನ ತಂಡವು 5000 ವರ್ಷಗಳ ಹಿಂದಿನ ಮಾನವನೆಂದು ನಂಬಲಾದ ಅಸ್ಥಿಪಂಜರವನ್ನು ಹೊರತೆಗೆದಿದೆ ; ಇದರ ಮುಂದಿನ ಎರಡು ಹಲ್ಲುಗಳು ಉತ್ತಮ ಸ್ಥಿತಿಯಲ್ಲಿವೆ ; ಕತ್ತಿನಲ್ಲಿ 3 ಎಳೆ ಸರವಿದೆ : ಕೈಲಿ ಮೊಹರಿದೆ.

★

ಪಾರ್ಲೆ ಲಾಮಾರ ಸ್ವಾಗತಕ್ಕೆ

ನವದೆಹಲಿ— ಚೀನಾ ಕಾರ್ಮಿಕ ಶಿಬಿರದಿಂದ ತಪ್ಪಿಸಿಕೊಂಡಿರುವ ಪಾಂಚನ ಲಾಮಾರು ಭಾರತಕ್ಕೆ ಬರುವರೆಂಬ ಆಶವಿಟ್ಟುಕೊಂಡು, ಧರ್ಮಶಾಲೆಯಲ್ಲಿರುವ ಟಿಬೆಟ್ಟನರು ಅವರ ಸ್ವಾಗತದ ಏರ್ಪಾಡಿಗೆ ಸಮಿತಿ ರಚಿಸಿರುವರು.

ಪೋಲೀಸರ ಅತ್ಯಾಚಾರ

ಬೆಂಗಳೂರು— ವಿದ್ಯಾರ್ಥಿಗಳ ಮೇಲೆ ಪೋಲೀಸರ ನಡೆಸಿದ ಅತ್ಯಾಚಾರ ಬಗ್ಗೆ ಶಾಸನ ಸಭೆಯಲ್ಲಿ ತಂದ ಅಡ್ಜರ್ನಮೆಂಟು ಮೋಷನ್ ತಿರಸ್ಕರಿಸಲ್ಪಟ್ಟಿತು — ಪೋಲೀಸರು ಕನಿಷ್ಟ ಬಲ ಪ್ರಯೋಗಿಸಿ ಹತೋಟಿಯಲ್ಲಿ ಕಾರ್ಯ ನಡೆಸಿರುವರೆಂದು ಮುಖ್ಯಮಂತ್ರಿಗಳು ಹೇಳಿದರು.

ದಿವ್ಯವಾಣಿ

ಭಾರತವನ್ನು ಸಾಮಾಜಿಕ ಮತ್ತು ರಾಜಕೀಯ ಕಲ್ಪನೆಯಿಂದ ತುಂಬುವುದಕ್ಕೆ ಮುಂಚೆ, ದೇಶದಲ್ಲಿ ಪಾರಮಾರ್ಥಿಕ ಕಲನೆಗಳಿಂದ ತುಂಬಬೇಕು.

— ಸ್ವಾಮಿ ವಿವೇಕಾನಂದರು

ಏಷ್ಯಾ ರಕ್ಷಣಾ ವ್ಯವಸ್ಥೆ

ಕಲ್ಕತ್ತಾ— ತಾವು ಯೋಜಿಸಿರುವ ಏಷ್ಯಾ ರಕ್ಷಣಾ ಒಪ್ಪಂದವು ಯುದ್ಧಕ್ಕಲ್ಲವೆಂದೂ, ಶಾಂತಿ ಕಾಪಾಡುವದಕ್ಕೆಂದೂ ರಷ್ಯಾ ಪ್ರಧಾನಿ ಕೋಸಿಗಿ ಹೇಳಿದರು.

★

ಕಾಲೇಜುಗಳ ಬಂದ್

ಬೆಂಗಳೂರು— ವಿಶ್ವವಿದ್ಯಾಲಯದ ಕಾಲೇಜುಗಳೆಲ್ಲಾ ಒಂದು ವಾರ ಮುಚ್ಚಲ್ಪಟ್ಟವು.

★

ಅಂತರ ವಿಶ್ವವಿದ್ಯಾಲಯ ಫುಟ್‌ಬಾಲ್

ಮೈಸೂರು— ಇಲ್ಲಿ ಅಕ್ಟೋಬರು 1 ರಿಂದ ಪ್ರಾರಂಭವಾಗುವ ಅಂತರ್ವಿಶ್ವವಿದ್ಯಾನಿಲಯ ಫುಟ್‌ಬಾಲ್ ಪಂಥದಲ್ಲಿ 14 ವಿಶ್ವವಿದ್ಯಾಲಯಗಳು ಭಾಗವಹಿಸುತ್ತವೆ.

ಇತರರ ಪ್ರೇರೇಪಣೆ

ಬೆಂಗಳೂರು— ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಚಳವಳಿದ ಹಿಂದೆ ಯಾರು ಪ್ರೇರೇಪಿಸುತ್ತಿರುವರೆಂಬುದು ಸರಕಾರಕ್ಕೆ ಗೊತ್ತಿದೆಯೆಂದೂ, ಸೂಕ್ತ ಕಾಲದಲ್ಲಿ ಅವರ ಮೇಲೆ ಕ್ರಮ ಕೈಗೊಳ್ಳಲಾಗುವುದೆಂದೂ, ಈಗ ಹಾಗೆ ಮಾಡಿದರೆ ಪರಿಸ್ಥಿತಿ ಉದ್ರಿಕ್ತಗೊಳ್ಳುವುದೆಂದೂ ಮುಖ್ಯಮಂತ್ರಿಯವರು ಶಾಸನಸಭೆಯಲ್ಲಿ ಹೇಳಿದರು.

ಅಶ್ರುವಾಯು ಪ್ರಯೋಗ

ಬೆಂಗಳೂರು— ನಿನ್ನೆಯ ವಿಶ್ವವಿದ್ಯಾನಿಲಯದ ಭಾಗದಲ್ಲಿ ಕಲ್ಲೆಸೆಯುತ್ತಿದ್ದ ವಿದ್ಯಾರ್ಥಿಗಳ ಮೇಲೆ ಐದು ಸಂದರ್ಭಗಳಲ್ಲಿ ಅಶ್ರುವಾಯು ಪ್ರಯೋಗಿಸಲಾಯಿತು.

ಮಳೆ

ಹೈದರಾಬಾದು— ಅನಾವೃಷ್ಟಿ ಭಾಗಗಳಲ್ಲಿ ಸರಕಾರ ಕೃತಿಕ ಮಳೆ ಸುರಿಸಬೇಕು, ಇಲ್ಲದಿದ್ದರೆ ಮಳೆಗಾಗಿ ಯಜ್ಞಯಾಗಾದಿಗಳನ್ನು ನಡೆಸಬೇಕು ಎಂದು ಶಾಸನ ಸಭೆಯಲ್ಲಿ ಸದಸ್ಯರೊಬ್ಬರು ಹೇಳಿದರು.

ಸರಕಾರ ವಶಪಡಿಸಿಕೊಳ್ಳುವುದು

ಕಲ್ಕತ್ತಾ— ಬಂಕೂರಾದಲ್ಲಿನ 4 ಎಕ್ರೆ ಭೂಮಿಯಲ್ಲಿರುವ ಬಹು ಅಂದವಾದ ತೋಟದ ಮನೆಯನ್ನು ವಶಪಡಿಸಿಕೊಳ್ಳಲಾಗುವುದೆಂದು ಹೇಳಲಾಗಿದೆ.

ನಾಟಕಗಳಿಗೆ ಪ್ರೋತ್ಸಾಹ

ಬೆಂಗಳೂರು— ರಿಜಿಸ್ಟರಾದ ನಾಟಕ ಕಂಪೆನಿಗಳಿಗೆ ಪ್ರೋತ್ಸಾಹ ನೀಡುವ ಬಗ್ಗೆ ವಿದ್ಯಾಭ್ಯಾಸ ಇಲಾಖೆ ತಯಾರಿಸಿರುವ ಸ್ಕೀಮ್ ಪರ್ಯಾಲೋಚನೆಯಲ್ಲಿ ಇದೆಯೆಂದು ಶಾಸನಸಭೆಯಲ್ಲಿ ತಿಳಿಸಲಾಯಿತು.

ಕಳ್ಳಾಳ ದಿನ

ಮೈಸೂರು— ಜರೂಸೆಲಂನಲ್ಲಿ ಮುಸೀದಿ ಸುಡಲಾದ್ದನ್ನು ಪ್ರತಿಭಟಿಸಿ ತಾ || 12 ರಂದು ಕರಾಳ ದಿನ ಆಚರಿಸಲು ನಗರದ ಮುಸ್ಲಿಂರು ನಿರ್ಧರಿಸಿದ್ದಾರೆ.

ತಾ.12-9-69ನೇ ಶುಕ್ರವಾರದಿಂದ ಅಮೋಘ
... ದಿನ 3 ಆಟಗಳು .... — ಪ್ರಾರಂಭ
ಒಲಂಪಿಯಾ ಮತ್ತು ಶ್ರೀ ಚಿತ್ರಮಂದಿರಗಳಲ್ಲಿ
ದಿನ : 2-30, 6 ಮತ್ತು 9-30 ಕ್ಕೆ ದಿನ : 3, 6-30, 10 ಕ್ಕೆ
ಮೆಹಮೂದ್ ಭೀಮ್‌ಸಿಂಗ್ ಪ್ರೊಡಕ್ಷನ್ಸ್‌ರವರ
ಅತ್ಯುತ್ತಮ ಸಂಗೀತಭರಿತ, ಹಾಸ್ಯಮಯ ವರ್ಣರಂಜಿತ ಚಿತ್ರ
ನಾಧು ಪೆರ್ ಶೆತಾನ್
ಪಾತ್ರ : ಮೆಹಮೂದ್ ಭಾರತಿ, ಪ್ರಾಣ್, ಓಂಪ್ರಕಾಶ್, ಕಿಶೋರ್ ಕುಮಾರ್
ಸಂಗೀತ : ಲಕ್ಷ್ಮೀಕಾಂತ್ ಪ್ಯಾರೇಲಾಲ್ — ನಿರ್ದೇಶನ : ಎ. ಭೀಮ್‌ಸಿಂಗ್

(2)

ಮೋಟಾರು ಬೆಲೆ ಏರಿಕೆ

ಬೊಂಬಾಯಿ— ಪ್ರಿಮಿಯರ್ ಮೋಟಾರು ಸಂಸ್ಥೆಯು ತನ್ನ ಫಿಯಟ್ ಕಾರಿನ ಬೆಲೆಯನ್ನು ರೂ 2312 ಹೆಚ್ಚಿರುವದು ಸರ್ಕಾರಕ್ಕೆ ಆಶ್ಚರ್ಯ ಉಂಟುಮಾಡಿದೆ. ಈ ಹೆಚ್ಚಿಗೆ ರದ್ದು ಪಡಿಸಲು ತಿಳಿಸಲಾಗಿದೆ.

ಸರ್ಕಾರಕ್ಕೆ ಬಿದ್ದ ದಂಡ

ಬೆಂಗಳೂರು— 21— 21 ವರ್ಷಗಳ ಹಿಂದೆ ಚನ್ನಪಟ್ಟಣದಲ್ಲಿ ಪ್ರವಾಸಿ ಮಂದಿರ ಕಟ್ಟಲು ವಶಪಡಿಸಿಕೊಂಡ ಸ್ಥಳದ ಪಕ್ಕದ 22 ಗುಂಟೆ ಖಾಸಗೀ ಭೂಮಿಗೂ ಬೆಲೆಹಾಕಲಾಗಿತ್ತೆಂದೂ, ಪಾರ್ಟಿಯು ಮೊಖದ್ದಮೆ ಹೂಡಿ, ರೂ. 14265 ಪರಿಹಾರ ಪಡೆದನೆಂದೂ, ಖಾಸಿಗೆ ಭೂಮಿ ಆಕ್ರಮಣದಿಂದ ಇದು ಸರಕಾರಕ್ಕಾದ ದಂಡವೆಂದೂ ವಿಧಾನಪರಿಷತ್ತಿನಲ್ಲಿ ತಿಳಿಸಲಾಯಿತು.

★

ಮನನಾರ್ಹ ವಿಷಯಗಳು

ಭೂಲೋಕದಲ್ಲಿ ಮನುಷ್ಯನು ಪೂರ್ಣಾಸಕ್ತಿಯಿಂದ ಮಾಡುತ್ತಿರುವ ಸಾಹಸ ಕಾರ್ಯಗಳ ಗುಟ್ಟೆಲ್ಲಾ ಹೊಸ್ಸು ಹೆಣ್ಣುಗಳನ್ನು ಸ್ವತಂತ್ರಿಸಿಕೊಂಡು ಅವುಗಳಲ್ಲಿ ವಿಶ್ರಾಂತಿ ಹೊಂದಬೇಕೆಂಬುದೇ ಆಗಿದೆ.

ಮನುಷ್ಯನು ಒಳ್ಳೆಯದಕ್ಕೋಸ್ಕರವೇ ಕೆಟ್ಟುದನ್ನು ಸಹಿಸಬೇಕಾಗಿದೆ : ಒಳ್ಳೆಯದರ ಸಂಗಡ ಸಂತೋಷಿಸುವುದಕ್ಕಿಂತಲೂ ಕೆಟ್ಟುದರ ಸಂಗಡ ಚಿಂತಿಸಬೇಕಾಗಿರುವುದೇ ಹೆಚ್ಚಾಗಿದೆ.

ಕೊಡುವ ಅರವನ್ನು ಮೂವೆಂದರೆ, ಥಂಭವು ಮೂರನ್ನು ಆರಿನ್ನುತ್ತದೆ : ಈ ಎರಡು ಗುಣಗಳಿಗೂ ಕಪಟವಂಚನಾದಿಗಳು ಅಂಗವಾಗಿದ್ದರೂ ಸುಳ್ಳೇ ಜೈತನ್ಯವಾಗಿದೆ.

ನಾಲಿಗೆಯು ಮನುಷ್ಯನ ಹಾನಿ ವೃದ್ಧಿಗಳಿಗೆ ಮೂಲವಾಗಿದೆ.

Quality Printing — Neat Binding

Lakshminarasimha Press

Sivarampet, Mysore

Help The Gorakshana



ಗೋರಕ್ಷಣೆ ಮತ್ತು ಪಾಣಿದಯಾ ಕಾರ್ಯಗಳು ಹೆಚ್ಚಾಗಿ ನಡೆಯಲಿ

ಗೋರಕ್ಷಣೆಗೆ ಬೆಂಬಲ ನೀಡಿ

Protect the Cow

ವುಡ್‌ಲ್ಯಾಂಡ್ಸ್ ತಾ: 5—9—69 ರಿಂದ

ಅಮೋಘ ಪ್ರಾರಂಭ

— ಅತ್ಯಾಕರ್ಷಣೀಯ ಈಸ್ಟ್‌ಮೆನ್ ಕಲರ್ ಹಿಂದಿ ಚಿತ್ರ —

ಸಾಜನ್ SAAJAN

ನಟವರ್ಗ— ಮನೋಜ್‌ಕುಮಾರ್, ಆಶಾ ಪರಾಖ್, ಓಂಪ್ರಕಾಶ್

ಮದನಪುರಿ, ಶಬ್‌ನಮ್

ನಿರ್ದೇಶನ : ಮೋಹನ್ ಸೇಗಾಲ್ ಸಂಗೀತ : ಲಕ್ಷ್ಮೀಕಾಂತ ಪ್ಯಾರೇಲಾಲ್

[ದಿನ 3 ಪ್ರದರ್ಶನಗಳು]

ಅಪೆರಾ 5-9-69 ರಿಂದ

.... ಚಿತ್ರಾಕರ್ಷ ಈಸ್ಟ್‌ಮೆನ್ ಕಲರ್ ಹಿಂದಿ ಚಿತ್ರ ....

ಮಹಲ್

ಪಾತ್ರ— ದೇವಾನಂದ್, ಆಶಾ ಪರಾಖ್, ಅಭಿ ಭಟ್ಟಾಚಾರ್ಯ

ಡೇವಿಡ್, ಅಜ್ರಾ, ಸುಧಿರ್

ನಿರ್ದೇಶನ— ಶೇಖರ್ ಮುಖರ್ಜಿ ಸಂಗೀತ— ಕಲ್ಯಾಣ್‌ಜಿ ಆನಂದ್ಜಿ

ದಿನ 3 ಆಟಗಳು

Golden Jubilee of 'Satyavadi'

Sunday 28—9—1969

The President, the Prime Minister, H H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah Sri Madhav Shenoi, Sri Opera Talkies, Padmabhushana Dr. M.C. Modi, Dr. R. S. Nanjunda Swamy (Glasgow), Sri Ananthanarasimha Iyengar (Honganur) have generously extended donations and best wishes.

It is welknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, ' Satyavadi ' Chamarajapuram, Mysore 4.

SHAKTI SUDHA

A Superb Tonic

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore 4